ಸಾಧ್ಯವಿಲ್ಲ ಎಂಬ ದಾಗಿ ವಿಜಿಲೆನ್ಸ್ ಬರೆಯತಕ್ಕಂತಹದ್ದು, ಅದರ ಬಗ್ಗೆ ತಾರತಮ್ಯ ಇದೆ. ಅದರ ಬಗ್ಗೆ ಯಾವುದೇ ಒಬ್ಬ ವ್ಯಕ್ತಿಯ ಹೆಸರನ್ನು ತೆಗೆದು ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಇದರಲ್ಲಿ ಏನಾದರೊಂದು ನಿಖರವಾದ ದೋರಣೆಯನ್ನು ತಾಳಿ ತೀರ್ಮಾನ ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ರಾಮ್‌ದೇವ್‌ರವರು ಹೇಳಿದ ಹಾಗೆ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆಯನ್ನು ಕೊಡುವುದಕ್ಕೆ ಹೊರಟಿದ್ದೇವೆ ಎನ್ನುವ ಸಾಮೂಹಿಕ ಅಪಾದನೆಯನ್ನು ಕೇಳುವುದಕ್ಕೆ ಸಿದ್ಧರಿಲ್ಲ. ಇವತ್ತು ಕೆಲವರು ೬ ತಿಂಗಳಿಗೆ ಮೇಲ್ಪಟ್ಟು ೨ ವರ್ಷ ೩ ವರ್ಷ ಇರಬಹುದು. ಇದರ ಬಗ್ಗೆ ಸರಿಯಾದಂತಹ ಪಾಲಿಸಿ ಡಿಸಿಸನ್ ಮಾಡಬೇಕಾಗಿದೆ. ಇದರಿಂದ ಅವರಿಗೆ ನಿಮ್ಮದಿ ಇಲ್ಲ. ಅಮಾನತ್ತಿನಲ್ಲಿರತಕ್ಕಂತಹ ಕೇಸುಗಳನ್ನು ರೀ ಇನ್ವೆಸ್ಟಿಗೇಟ್ ಮಾಡಿ, ಅವರ ಮೇಲೆ ತರತಕ್ಕಂತಹ ಪೊಕದ್ದಮೆಗಳು ಯಾವ ಕೊರ್ಟಿನಲ್ಲಾದರೂ ನಡೆದುಕೊಂಡು ಹೋಗುವುದಕ್ಕೆ ಆಕ್ಷೇಪಣೆಯನ್ನು ತರಬಾರದು. 2–3 ವರ್ಷ ಅಮಾನತ್ತಿನಲ್ಲಿಡತಕ್ಕಂತಹದ್ದು ಸರಿಯಾದುದಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಸರ್ಕಾರ ಈ ಬಗ್ಗೆ ಒಂದು ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ಆ ನಿರ್ಣಯವನ್ನು ಇನ್ನೂ ಮಾಡಿಲ್ಲ ವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಭೆಯ ಮುಂದೆ ರೆಕಾರ್ಡನ್ನು ಇಡಬೇಕೆಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ, ಅದಕ್ಕೆ ತಾವು ಯಾವ ನಿಮಿಷದಲ್ಲಿ ಇಡಬೇಕೆಂದು ಹೇಳಿದರೂ ಆ ನಿಮಿಷದಲ್ಲಿ ಸದನದ ಮುಂದೆ ಸಂಬಂಧಪಟ್ಟ ರೆಕಾರ್ಡುಗಳನ್ನು ಇಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎಚ್. ಗಂಗಾಧರನ್.—ಈ ರೀತಿಯು ರೈಡ್ ಮಾಡಿದಾಗ ಲಕ್ಷಾಂತರ ರೂಪಾಯಿ ದುಡ್ಡು ಸಿಕ್ಕಿದೆ ಅಂತ ವರದಿ ಬಂದಿದೆ. ಅದು ಏನಾಯಿತು ಎಂಬುದಕ್ಕೆ ತಾವು ಉತ್ತರ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎಚ್. ಡಿ. ದೇವೇಗೌಡ.—ಏನು ಸಿಕ್ಕಿದೆ ಎಂಬ ವಿಚಾರ ಈ ಫೈಲಿನಲ್ಲಿದೆ. ಪತ್ರಿಕೆಗಳಲ್ಲಿ ಬಂದದ್ದನ್ನು ನಾನೂ ನಿಮ್ಮ ಹಾಗೇ ಓದಿದ್ದೇನೆ.

ಶ್ರೀ ಕೆ. ಮಲ್ಲಪ್ಪ.—ಹಿಂದಿನ ಸರ್ಕಾರದಲ್ಲಿದ್ದಂತಹ ಮಂತ್ರಿಗಳು ಆಯಾ ಇಲಾಖೆಯ ಅಧಿಕಾರಿಗಳಿಗೆ ತಿಂಗಳಿಗೆ ಇಂತಿಷ್ಟು ಹಣವನ್ನು ಕೊಡಬೇಕೆಂಬ ಪದ್ಧತಿಯನ್ನು ಅನುಸರಿಸಿದ್ದರು. ಆ ಪದ್ಧತಿಗನುಸಾರವಾಗಿ ಕೊಡದೇ ಇರತಕ್ಕಂತಹ ಅಧಿಕಾರಿಗಳನ್ನು ದುರುದ್ದೇಶದಿಂದ ಅಮಾನತಿನಲ್ಲಿಟ್ಟಿರತಕ್ಕಂತಹ ವಿಚಾರ ಈಗಿನ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಅದನ್ನು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೋ ಗೊತ್ತಿಲ್ಲ. ಆದರೆ ಅಂತಹ ವಿಷಯ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಾರಾಸಗಟು ಈ ತರಹ ಹಿಂದಿನ ಸರ್ಕಾರದ ಮೇಲೆ ಆರೋಪಣೆಯನ್ನು ಯಾವುದೇ ಸದಸ್ಯರು ಮಾಡಬಾರದು. ನಿರ್ದಿಷ್ಟ ಕೇಸುಗಳು ಈ ತರಹದ್ದು ಇದ್ದರೆ ಅದನ್ನು ಬೇಕಾದರೆ ಹೇಳಲಿ. ಅದನ್ನು ಬಿಟ್ಟು ಸಾರಾಸಗಟು ಈ ರೀತಿಯ ಆರೋಪಣೆ ಮಾಡುವುದು ಸದನದ ಗಂಭೀರಕ್ಕೆ ತಕ್ಕುದಲ್ಲ ಎಂಬುದಾಗಿ ಹೇಳುತ್ತೇನೆ,

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಮಂತ್ರಿ ಲಿಖಿತ ಮೂಲಕ ಕೊಟ್ಟ ಉತ್ತರಗಳು.—

ಉಪಾಧ್ಯಕ್ಷರು.— ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

೪೫. ಶ್ರೀ ಗೋವಿಂದಗೌಡ (ಶೃಂಗೇರಿ).— ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ಉತ್ತರಿಸುವರೇ ?

(ಅ) ಮಲೆನಾಡಿನ ರೈತರಿಗೆ ಅತಿ ಮುಖ್ಯವಾಗಿ ದಿನ ನಿತ್ಯದ ಬಳಕೆಗೆ ಆಗತ್ಯವಿರುವ ಸೊಪ್ಪು ಸೌದೆ (ಕಟ್ಟಿಗೆ) ಯನ್ನು ಅರಣ್ಯದಿಂದ ಪಡೆಯಲು ಮತ್ತು ಉಪಯೋಗಿಸಲು ರಹದಾರಿ ನೀಡಲಾಗಿರುವುದೆ ?